


# ಶೌರ್ಯ, ತ್ಯಾಗದ ಪ್ರತೀಕ

# ಜಸ್ವಂತ್‌ಘರ್ ಯುದ್ಧ ಸ್ಮಾರಕ

**ಜಸ್ವಂತ್ ಸಿಂಗ್ ರಾವತ್ ವೀರಾವೇಶದ, ದೇಶಪ್ರೇಮದ ಪ್ರತೀಕದಂತೆ ನಿಂತಿದೆ ಅರುಣಾಚಲ ಪ್ರದೇಶದಲ್ಲಿನ ಜಸ್ವಂತ್‌ಘರ್ ವಾರ್ ಮೆಮೊರಿಯಲ್**

■ ಗೀತಾ ಕುಂದಾಪುರ

ಮಳೆ, ಚಳಿ, ಬಿಸಿಲೆನ್ನದೆ ಗಡಿ ಕಾಯುವ, ಸಾವಿಗೆ ಅಂಜದ, ತಾಯ್ನಾಡಿಗಾಗಿ ಹೋರಾಡಲು ಸದಾ ಸಿದ್ಧವಿರುವ ಸೈನಿಕರ ಬಗ್ಗೆ ಭಾರತೀಯರ ಮನದಲ್ಲಿ ವಿಶೇಷ ಸ್ಥಾನಮಾನವಿದೆ. ಯುದ್ಧದಲ್ಲಿ ಹೋರಾಡಿ ಶತ್ರುಗಳನ್ನು ಸದೆ ಬಡಿದು ಹುತಾತ್ಮರಾದ ಸೈನಿಕರ ಹಲವು ಸ್ಮಾರಕಗಳನ್ನು ಈ ನೆಲದಲ್ಲಿ ನೋಡಬಹುದು. ಅಂಥದ್ದೊಂದು ಸ್ಮಾರಕ ಅರುಣಾಚಲ ಪ್ರದೇಶದಲ್ಲಿರುವ ಜಸ್ವಂತ್‌ಘರ್ ವಾರ್ ಮೆಮೊರಿಯಲ್.

ಅರುಣಾಚಲದ ನುರಾನಂಗ್ ಜಿಲ್ಲೆಯ ಸೆಲಾ ಪಾಸ್‌ನ ಸಮೀಪವಿದೆ ಈ ಸ್ಮಾರಕ.

ಜಸ್ವಂತ್ ಸಿಂಗ್ ರಾವತ್, 19 ಆಗಸ್ಟ್ 1941ರಲ್ಲಿ ಈಗಿನ ಉತ್ತರಾಖಂಡದ ಧುಮಾಕೋಟ್‌ನ ರಜಪೂತ್ ಕುಟುಂಬದಲ್ಲಿ ಜನಿಸಿದರು. 19ನೇ ವಯಸ್ಸಿನಲ್ಲಿ ಸೈನ್ಯ ಸೇರಿದ ಅವರು ‘4 ಘರ್‌ವಾಲ್ ರೈಫಲ್ ರೆಜಿಮೆಂಟ್’ನ 4ನೇ ಬಂದೂಕುಧಾರಿ ಆದರು. ಚೀನಾ ಗಡಿ ತಗಾದೆ ತೆಗೆದು 1962ರ ಅ. 20ರಂದು ಭಾರತದೊಡನೆ ಯುದ್ಧ ಶುರುಮಾಡಿತು. ಹೋರಾಟ ಮುಂದುವರಿದು ಚೀನಾ ಸೈನ್ಯವು ಮೀಡಿಯಮ್ ಮೆಷಿನ್ ಗನ್‌ನೊಂದಿಗೆ ಭಾರತದ ರಕ್ಷಣಾಪಡೆ ಮೇಲೆ ಗುಂಡು ಹಾರಿಸಿತು, ಜಸ್ವಂತ್ ಸಿಂಗ್, ಗುಸೇನ್ ಮತ್ತು ನೇಗಿ ಎಂಬ ಮತ್ತಿಬ್ಬರು ಬಂದೂಕುಧಾರಿಗಳೊಂದಿಗೆ ಮುನ್ನುಗ್ಗಿ ಗ್ರೆನೇಡ್ ಎಸೆಯತೊಡಗಿದರು. ವಿರೋಧಿಗಳ ಆಯುಧವನ್ನೂ ವಶಪಡಿಸಿಕೊಂಡರು. 300ಕ್ಕೂ ಅಧಿಕ ಚೀನಾ ಸೈನಿಕರು ಕೊಲ್ಲಲ್ಪಟ್ಟರು. ಯುದ್ಧದಿಂದ ಹಿಂತಿರುಗುವಾಗ ಗುಸೇನ್ ಮತ್ತು ನೇಗಿ ತೀರಿಕೊಂಡರು. ಜಸ್ವಂತ್ ಸಿಂಗ್‌ಗೆ ತೀವ್ರ ಗಾಯವಾಯಿತು. ಆಗಲೂ ಜಸ್ವಂತ್ ಹೋರಾಟ ಮುಂದುವರಿಸಿದರು.

ಮುಂದೆ 72 ಗಂಟೆಗಳ ಕಾಲ ಬೇರೆ ಬೇರೆ ಬಂಕರ್‌ನಿಂದ ಗುಂಡು ಹಾರಿಸಿ ಯುದ್ಧ ಮಾಡಿದರು. ಭಾರತದ ದೊಡ್ಡ ಸೈನ್ಯವೇ ಅಲ್ಲಿದೆ ಎಂದುಕೊಂಡ ಚೀನಾ ಸೈನಿಕರು ಹಿಮ್ಮೆಟ್ಟಿದರು. ಕೊನೆಗೆ ಚೀನಾ ಸೈನಿಕರು ಸ್ಥಳೀಯ ವ್ಯಾಪಾರಿಯೊಬ್ಬನನ್ನು ಹಿಡಿದು ಕೇಳಿದಾಗ ಯುದ್ಧ ಮಾಡುತ್ತಿರುವುದು ಒಬ್ಬನೇ ಸೈನಿಕ ಎನ್ನುವುದು ಗೊತ್ತಾಗಿ ಜಸ್ವಂತ್ ಮೇಲೆ ಮುಗಿಬಿದ್ದರು.

ಜಸ್ವಂತ್ ಹೇಗೆ ಸತ್ತರು ಎನ್ನುವುದು ಕರಾರುವಾಕ್ಕಾಗಿ ತಿಳಿದಿಲ್ಲ. ಕೊನೇ ಗಳಿಗೆಯಲ್ಲಿ ಚೀನಾ ಸೈನಿಕರ ಸೆರೆಗೆ ಸಿಗುವ ಬದಲು ತಾವೇ ಗುಂಡು ಹಾರಿಸಿಕೊಂಡು ಸತ್ತರು ಎನ್ನುತ್ತಾರೆ ಕೆಲವರು. ಸೆರೆ ಹಿಡಿದು ಕೊಂದು ಯುದ್ಧ ಮುಗಿದ ಮೇಲೆ ಜಸ್ವಂತ್ ಶಿರವನ್ನು ಭಾರತಕ್ಕೆ ವಾಪಸ್ ಕೊಟ್ಟರು ಎನ್ನುವವರೂ ಇದ್ದಾರೆ.

ವಾದ ವಿವಾದ ಏನೇ ಇದ್ದರೂ ಜಸ್ವಂತ್ ಸಿಂಗ್ ಶೌರ್ಯ, ಸಾಹಸಕ್ಕೆ ಹೆಸರುವಾಸಿಯಾದರು. ಭಾರತ ಸರ್ಕಾರ ಜಸ್ವಂತ್ ಸಿಂಗ್‌ಗೆ ಮರಣೋತ್ತರ ಬಡ್ತಿಯಲ್ಲದೆ ಮಹಾವೀರ ಚಕ್ರ ಕೊಟ್ಟು ಗೌರವಿಸಿತು. ಯುದ್ಧದಲ್ಲಿ ಜಸ್ವಂತ್‌ಗೆ ಸಹಾಯ ಮಾಡಿದ ಸೆಲಾ ಹಾಗೂ ನೂರಾ ಎಂಬ ಮಹಿಳೆಯರ ಹೆಸರಿನಲ್ಲಿ ಸೆಲಾ ಪಾಸ್, ಸೆಲಾ ಲೇಕ್, ಸೆಲಾ ಟನಲ್, ನೂರಾನಂಗ್ ಫಾಲ್ಸ್ ಎಂದು ಹೆಸರಿಸಲಾಗಿದೆ.

ಜಸ್ವಂತ್ ಯಾವ ಜಾಗದಲ್ಲಿ ಚೀನಾದೊಂದಿಗೆ ಹೋರಾಡಿದರೋ ಅಲ್ಲೇ ‘ಜಸ್ವಂತ್‌ಘರ್ ಸ್ಮಾರಕ’ ಕಟ್ಟಲಾಗಿದೆ. ಇಲ್ಲಿ ಸದಾ ಸೈನಿಕರ ಕಾವಲಿರುತ್ತದೆ. ಮಂದಿರದಂತೆ ಕಾಣುವ ಈ ಸ್ಮಾರಕದಲ್ಲಿ ಜಸ್ವಂತ್ ಸಿಂಗ್ ರಾವತ್‌ರ ಕಂಚಿನ ಮೂರ್ತಿ ಇದೆ. ಜಸ್ವಂತ್ ಸೇನಾ ಸಮವಸ್ತ್ರ, ಟೋಪಿ, ವಾಚು, ಬೆಲ್ಟನ್ನೂ ಪ್ರದರ್ಶನಕ್ಕಿಡಲಾಗಿದೆ.

ಇನ್ನೊಂದು ವಿಶೇಷವೆಂದರೆ, ಜಸ್ವಂತ್ ಇನ್ನೂ ಬದುಕಿದ್ದಾರೆಯೋ ಎಂಬಂತೆ ಬೆಳಿಗ್ಗೆ 4.30ಕ್ಕೆ ಬೆಡ್ ಟೀ, 9 ಗಂಟೆಗೆ ಉಪಾಹಾರ, ರಾತ್ರಿ 7ಕ್ಕೆ ಊಟ ಕೊಡಲಾಗುತ್ತಿದೆ.

ದೇಶಭಕ್ತಿಗೆ ಉದಾಹರಣೆಯಂತಿರುವ ಜಸ್ವಂತ್ ಸಿಂಗ್ ಜೀವನಚರಿತ್ರೆ, ಯುದ್ಧದಲ್ಲಿ ತೋರಿದ ವೀರಾವೇಶ ಕೇಳುತ್ತಿದ್ದಂತೆ ಕಣ್ಣಲ್ಲಿ ನೀರಾಡುವುದು ಸಹಜ. ಜಸ್ವಂತ್ ಮೂರ್ತಿಗೆ ಭಾರವಾದ ಹೃದಯದಿಂದಲೇ ಹೂವೇರಿಸಿ ಕೈ ಮುಗಿದು ಬರುತ್ತೇವೆ. ಹತ್ತಿರದಲ್ಲೇ ಜಸ್ವಂತ್ ಹೋರಾಟದ ಭಾಗವಾಗಿದ್ದ ಬಂಕರ್, ಭೂಗತ ಅಡಗುಸ್ಥಳವನ್ನೂ ನೋಡಬಹುದು.

ಜಸ್ವಂತ್‌ಘರ್ ವಾರ್ ಮೆಮೊರಿಯಲ್ ಸಮುದ್ರ ಮಟ್ಟದಿಂದ ಸುಮಾರು 10 ಸಾವಿರ ಅಡಿಗಳಿಗಿಂತಲೂ ಎತ್ತರದ ಪ್ರದೇಶದಲ್ಲಿದೆ. ಸ್ಮಾರಕದ ಎದುರು ಯುದ್ಧಕ್ಕೆ ಹೊರಟ ಸೈನಿಕನ ಮೂರ್ತಿಯಿದೆ, ಭಾರತದ ಧ್ವಜ ಹಾರಾಡುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in